ಬೆಂಗಳೂರು ಡಿವಿಜ಼ನ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ರ 1906—07ನೆ ಇಸವಿ ಮಿಸ್ ನಂಬರ್ 79.

ಅರ್ಜಿದಾರ ಬೆಂಗಳೂರು 2ನೆ ಲಾಲ್‌ಬಾಗು ರೋಡಿನಲ್ಲಿ ಲೇಟ್ ಅಮಲ್‌ದಾರು ಮೆ॥ ವಿ. ಕಂಠೀರವಾಚಾರ್ರ ಮಕ್ಕಳು ವಿ. ದ್ವಾರಕಾನಾಥ್ ಯವರು, ಮೈನರಾದ ಬೆಂಗಳೂರು ಸ್ಥಳದ ಲೇಟ್ ಅಮಲ್‌ದಾರು ಕಂಠೀರವಾಚಾರ್ರ ಮಕ್ಕಳು 1ನೆ ಕವಿತರ್ಕ ಸಿಹ್ಮಂ, 2ನೆ ದತ್ತಾತ್ರೇಯ ಸಿಹ್ಮಂ ಯವರ ಆಸ್ತಿ ವಿಷಯದಲ್ಲಿ—

ಸದರಿ ಮೈನರಾದ 1ನೆ ಕವಿತರ್ಕ ಸಿಹ್ಮಂ, 2ನೆ ದತ್ತಾತ್ರೇಯ ಸಿಹ್ಮಂ ಯವರಿಗೆ ಮೆ॥ ಕಂಠೀರವಾಚಾರ್ ಉಯಿಲ್ ಪ್ರಕಾರ ಗಾರ್ಡಿಯನ್ ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಲಾಲ್‌ಬಾಗ್ ರೋಡ್ ಲೇಟ್ ಅಮಲ್‌ದಾರ್ ಮೆ॥ ಕಂಠೀರವಾಚಾರ್ರ ಮಕ್ಕಳು ವಿ. ದ್ವಾರಕಾನಾಥ ಎಂಬವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ರ 1907ನೆ ಇಸವಿ ಮೇ ತಾರೀಖು 31ನೆ ದಿವಿ 11 ಘಂಟ್ಟೆಗೆ ಮೊಕರರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಈ ತಾರೀಖು 5ನೆ ಮಾಹೆ ಏಪ್ರೆಲ್ 1907ನೆ ಇಸವಿ ಕೋರ್ಟ್‌ನ ಮೊಹರು ನಮ್ಮ ಹಸ್ತಾಕ್ಷರದೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ್ ಫೈಂಬ್‌ರಾಕ್ಸ್ ಸಬ್ ತಾಲ್ಲೂಕು ಕನ್ನಾಳು ಗ್ರಾಮದಲ್ಲಿ ಇರುವ ಸೋಮೇಗೌಡನ ಹೆಂಡತಿ ಲಕ್ಷ್ಮಿಯ ಆರ್ಜಿ ವಿಷಯದಲ್ಲಿ—

ಸ್ರ 1906—07ನೆ ಇಸವಿ ದಿವಾಳಿ ಕೇಸ್ ನಂ. 189.

ಹುಕ್ಕುಂ.

ಮೇಲ್ಕಂಡ ಅರ್ಜಿದಾರಳು ನಿರ್ಬಂಧದಿಂದ: ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬುರೂಬ್ ಅರ್ಜಿದಾರಳಾದ ಲಕ್ಷ್ಮಿಯ ಪರವಾಗಿ ಪ್ಲೀಡರ್ ಮೆ॥ ಮೈಲಾರಯ್ಯನವರನ್ನು ಮತ್ತು ಸದರಿಯವರ ಲೇಣೆದಾರರಾದ ಮೈಸೂರ ಗೌರ್ನಮೆಂಟ್ ತರಫ್ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರು ಗೈರ್ ಹಾಜರು ಸಬಬು ದರ್ಯಾಪ್ತ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿ ಯಾಗಲಿ, ಅಥವಾ ಲಾಯರ ಮೂಲಕವಾಗಿಯಾಗಲಿ, ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರಿ ಅರ್ಜಿದಾರಳು ಲಕ್ಷ್ಮಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟರುತ್ತೆಯಾಗಿ ಸದರಿ ದಿವಾಳಿಯಾದವಳನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹಾ ಅವಳನ್ನು ನಿಖಾಲಸ್ ಮಾಡಲಾಗಿರುತ್ತೆ ಎಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1907ನೆ ಇಸವಿ ಏಪ್ರೆಲ್ 13ನೆ ತಾರೀಖಿನಲ್ಲಿ ಕೋರ್ಟ್‌ನ ಮೊಹರ್ ಮತ್ತು ನಮ್ಮ ದಸ್ತಖತ್ ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್	ಲೇಣೇದಾರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಪೈಕಿ ಬಾಕಿ ಇರುತ್ತದೆ.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	2	ರೂ	4	5	6
1	ಮೈಸೂರು ಗೌರ್ನಮೆಂಟ್ ತರಫ್ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರು.	88	...	ಈ ಕೋರ್ಟು ಸಿವಿಲ್ 1898—905-6ನೆ ನಂಬರು ಡಿಕ್ರಿ ಬಾಬತು.	

ಜಿ. ಸತ್ಯಾಜೀರಾವ್,
ಮುನ್ಸೀಫ್.